**ಹಿರಿಯ ಸಿವಿಲ್ ನ್ಯಾಯಾಲಯ ಮತ್ತು ಜೆ.ಎಮ್.ಫ್.ಸಿ ಸಿಂದಗಿ,**

**ಸಿ.ಸಿ ನಂ.1431/2024**

ಪಿರ್ಯಾದುದಾರರು ಃ ಸರಕಾರದ ಪರವಾಗಿ ಸಿಂದಗಿ ಪಿ.ಎಸ್

ವಿರುದ್ಧ

ಆರೋಪಿ ಃ ಸಂಜೀವ @ ಸಂಜು ತಂ. ಸೀತಾರಾಮ ಚವಾಣ,

**ದೋಷಾರೋಪಣೆ**

ಶ್ರೀ ನಾಗೇಶ ಕೆ. ಮೊಗೇರ.,ಬಿ.ಕಾಂ, ಎ.ಎಲ್.ಎಮ್
ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ.ದಂಡಾಧಿಕಾರಿಗಳು. ಆದ ನಾನು, ಆರೋಪಿಯರಾದ

ಸಂಜೀವ @ ಸಂಜು ತಂ. ಸೀತಾರಾಮ ಚವಾಣ,
ವಯಾಃ 32 ವರ್ಷ, ಉ ಃ ಕೂಲಿ ಕೆಲಸ,
ಸಾಃ ಗಬಸಾವಳಗಿ ,ತಾಃ ಆಲಮೇಲ.

ನಿಮ್ಮ ಮೇಲೆ ಈ ಕೆಳಗಿನಂತೆ ದೋಷಾರೋಪಣೆಯನ್ನು ಮಾಡುತ್ತಿದ್ದೇನೆ.

ಮೊದಲನೇಯದಾಗಿ ಸಿಂದಗಿ ಪೋಲಿಸ ಠಾಣೆ ವ್ಯಾಪ್ತಿಯ ಗಬಸಾವಳಗಿ ಗ್ರಾಮದ ಪಿರ್ಯಾದುದಾರರ ವಾಸದ ಮನೆಯಲ್ಲಿ ದಿನಾಂಕ 07.03.2024 ರಂದು 02.15 ಗಂಟೆಯ ಸುಮಾರಿಗೆ, ಆರೋಪಿತರಾದ ನೀವು ಪಿರ್ಯಾದುದಾರರ ಮನೆಗೆ ಅತೀಕ್ರಮಣ ಪ್ರವೇಶ ಮಾಡಿದ್ದು ಈ ಮೂಲಕ ಭಾ.ದಂ.ಸಂ. 448 ರ ಅಡಿಯಲ್ಲಿ ದಂಡನೀಯವಾದ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞಾನದೊಳಗೆ ಮಾಡಿರುವಿರಿ?

ಎರಡನೇಯದಾಗಿ ಆರೋಪಿಯಾದ ನೀವು 3 ತಿಂಗಳುಗಳಿಂದ ಪಿರ್ಯಾದುದಾರರನ್ನು ಹಿಂಬಾಳಿಸುವುದು, ಕಲ್ಲು ಹೊಡೆಯವುದು, ಕೈ ಸನ್ಯ

ಮಾಡುವುದು ಮತ್ತು ಇನಡ್ಯೆರಕ್ಟ ಆಗಿ ಅವಾಚ್ಯವಾಗಿ ಮಾತನಾಡುವುದು ಮಾಡಿದ್ದು ಈ ಮೂಲಕ ಭಾ.ದಂ.ಸಂ. 354 ಡಿ ರ ಅಡಿಯಲ್ಲಿ ದಂಡನೀಯವಾದ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞಾನದೊಳಗೆ ಮಾಡಿರುವಿರಿ?

ಮೂರನೇಯದಾಗಿ ಮೇಲೆ ಹೇಳಿದ ದಿನಾಂಕ, ವೇಳೆ ಮತ್ತು ಸ್ಥಳದಲ್ಲಿ ಆರೋಪಿಯಾದ ನೀವು ಪಿರ್ಯಾದುದಾರರ ಮನೆಗೆ ರಾತ್ರಿ ಹೋಗಿ ನಿನ್ನ ಮೇಲೆ ಪ್ರೀತಿಯಾಗಿದೆ ಎಂದು ಹೇಳಿದ್ದು, ಆಗ ಪಿರ್ಯಾದುದಾರರು ಹೊರಗೆ ಹೋಗು ಎಂದು ನುಗಿಸಿಕೊಟ್ಟಾಗ ಪಿರ್ಯಾದುದಾರರ ಸೀರೆ ಮತ್ತು ತಲೆ ಕೂದಲು ಹಿಡಿದು ಎಳೆದಾಡಿ ಹೆಣ್ಣುತನಕ್ಕೆ ಅವಮಾನ ಮಾಡಿದ್ದು ಈ ಮೂಲಕ ಭಾ.ದಂ.ಸಂ. 354 ರ ಅಡಿಯಲ್ಲಿ ದಂಡನೀಯವಾದ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞಾನದೊಳಗೆ ಮಾಡಿರುವಿರಿ?

ನಾಲ್ಕನೇಯದಾಗಿ ಮೇಲೆ ಹೇಳಿದ ದಿನಾಂಕ, ವೇಳೆ ಮತ್ತು ಸ್ಥಳದಲ್ಲಿ ಆರೋಪಿಯಾದ ನೀವು ಪಿರ್ಯಾದುದಾರರಿಗೆ ಅವಾಚ್ಯ ಶಬ್ದಗಳಿಂದ ಬೈದಿದ್ದು ಈ ಮೂಲಕ ಭಾ.ದಂ.ಸಂ.504 ರ ಅಡಿಯಲ್ಲಿ ದಂಡನೀಯವಾದ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞಾನದೊಳಗೆ ಮಾಡಿರುವಿರಿ?

ಈ ಮೇಲಿನ ಆರೋಪಣೆಗಳಿಗೆ ಈ ನ್ಯಾಯಾಲಯದ ಮುಂದೆ ನೀವು ವಿಚಾರಣೆ ಎದುರಿಸಬೇಕೆಂದು ನಿರ್ದೇಶಿಸುತ್ತೇನೆ.

ದಿನಾಂಕ ಃ 20.08.2024

ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು
ಪ್ರ.ದ.ನ್ಯಾ.ದಂಡಾಧಿಕಾರಿ, ಸಿಂದಗಿ.